# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಬೋಜನಾ ವೆಚ್ಚವನ್ನು ಹೆಚ್ಚಿಸುವ ಬಗ್ಗೆ

- - - - -

**ಪ್ರಸ್ತಾವನೆ:**

ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಲ್ಲಿ ಇರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಭೋಜನ ವೆಚ್ಚವನ್ನು ಮಾಹೆಯಾನ ರೂ. 650/- ಗಳಿಂದ ರೂ. 750/- ಗೆ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮಾಸಿಕ ವೆಚ್ಚ ರೂ. 750 /- ಗಳಿಂದ ರೂ. 850/- ಗಳಿಗೆ ಹೆಚ್ಚಿಸಲು 2011-12 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದೆ.

ಸದರಿ ಘೋಷಣೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

## ಆದೇಶ ಸಂಖ್ಯೆ ಸಕಇ 118 ಸಮನ್ವಯ 2011,
## ಬೆಂಗಳೂರು, ದಿನಾಂಕ 09.05.2011

ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಲ್ಲಿ ಇರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಹಾಗೂ ಮೆಟ್ರಿಕ್ ನಂತರ ವಿದ್ಯಾರ್ಥಿಗಳಿಗೆ ಮತ್ತು ವಸತಿ ಶಾಲೆಗಳಲ್ಲಿ ಇರುವ ವಿದ್ಯಾರ್ಥಿಗಳಿಗೆ ಭೋಜನ ವೆಚ್ಚವನ್ನು ಮಾಹೆಯಾನ ಈ ಕೆಳಕಂಡಂತೆ ಹೆಚ್ಚಿಸಲಾಗಿದೆ.

| ನಿಲಯ | ಈಗ ನೀಡುತ್ತಿರುವ ಮಾಸಿಕ ವೆಚ್ಚ | ಹೆಚ್ಚಿಸಿದ ಮಾಸಿಕ ವೆಚ್ಚ |
|---|---|---|
| 1) ಸರ್ಕಾರದ ಆಶ್ರಮ, ವಸತಿ ಶಾಲೆಗಳು - 1 ರಿಂದ 5 ನೇ ತರಗತಿಯವರೆಗೆ | ರೂ. 500/- | ರೂ. 600/- |
| 2) ಮೆಟ್ರಿಕ್ ಪೂರ್ವ ಮೊ.ದೇ.ವ.ಶಾಲೆಗಳು / ಕಿ.ರಾ.ಚೆನ್ನಮ್ಮ ವ.ಶಾಲೆಗಳು - 6 ರಿಂದ 10 ನೇ ತರಗತಿಯವರೆಗೆ | ರೂ. 750/- | ರೂ. 800/- |
| 3) ಮೆಟ್ರಿಕ್ ಪೂರ್ವ ಸರ್ಕಾರದ ವಿದ್ಯಾರ್ಥಿ ನಿಲಯಗಳು - 6 ರಿಂದ 10 ನೇ ತರಗತಿಯವರೆಗೆ | ರೂ. 650/- | ರೂ. 750/- |
| 4) ಮೆಟ್ರಿಕ್ ನಂತರದ ಸರ್ಕಾರದ ವಿದ್ಯಾರ್ಥಿ ನಿಲಯಗಳು | ರೂ. 750/- | ರೂ. 850/- |

ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಬೋಜನಾ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2225-01-277-0-71 (ಯೋಜನೆ), 2225-01-277-0-71 (ಯೋಜನೇತರ) ಮತ್ತು ಹೆಚ್ಚುವರಿ ಭೋಜನ ವೆಚ್ಚವನ್ನು 2225-01-277-0-74 (ಯೋಜನೆ) ಮತ್ತು 2225-01-277-0-74 (ಯೋಜನೇತರ) ಅಡಿಯಲ್ಲಿ ಭರಿಸುವುದು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ವೆಚ್ಚವನ್ನು ರಾಜ್ಯವಲಯ ಯೋಜನೆಯ ಲೆಕ್ಕ ಶೀರ್ಷಿಕೆ 2225-03-277-2-71, ಜಿಲ್ಲಾ ವಲಯ ಯೋಜನೆ ಲೆಕ್ಕ ಶೀರ್ಷಿಕೆ 2225-03-277-2-71 ಮತ್ತು 2225-03-277-2-72 ಮತ್ತು ಜಿಲ್ಲಾ ವಲಯ ಯೋಜನೇತರ ಲೆಕ್ಕ ಶೀರ್ಷಿಕೆ 2225-03-277-2-71 ಅಡಿಯಲ್ಲಿ ಭರಿಸುವುದು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಂಬಮಧಿಸಿದಂತೆ ವೆಚ್ಚವನ್ನು ಜಿಲ್ಲಾವಲಯ ಲೆಕ್ಕ ಶೀರ್ಷಿಕೆ 2225-02-277-0-71 ಮತ್ತು 2225-02-277-0-74 ಅಡಿಯಲ್ಲಿ ಭರಿಸುವುದು.

ಕರ್ನಾಟಕ ವಸತಿ ಶಿಕ್ಷಣ ಸಂಘಕ್ಕೆ ಸಂಬಂಧಿಸಿದಂತೆ ವೆಚ್ಚವನ್ನು ಲೆಕ್ಕಶೀರ್ಷಿಕೆ 2225-01-277-077 (ಪರಿಶಿಷ್ಟ ಜಾತಿ) ಯೋಜನೆ, 2225-01-277-0-76 (ಪರಿಶಿಷ್ಟ ಜಾತಿ) ಯೋಜನೆ 2225-02-277-0-76 (ಪರಿಶಿಷ್ಟ ವರ್ಗ), 2225-03-277-2-49 (ಹಿಂದುಳಿದ ವರ್ಗ) ಯೋಜನೆ ಮತ್ತು 2225-01-277-0-80 (ಸಾ.ವರ್ಗ ಶಿಕ್ಷಣ) ಯೋಜನೇತರ ಅಡಿಯಲ್ಲಿ ಭರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂ. ಆಇ 348 ವೆಚ್ಚ-3/2011 ದಿನಾಂಕ 03.05.2011 ರಂತೆ ಸಹಮತಿ ಪಡೆದು ಹೊರಡಿಸಲಾಗಿದೆ.

**ಈ ಆದೇಶವು ದಿನಾಂಕ 01.06.2011 ರಿಂದ (ಹೆಚ್ಚಿಸಿದ ಮಾಸಿಕ ವೆಚ್ಚ) ಜಾರಿಗೆ ಬರುತ್ತದೆ.**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್. ಲೋಕನಾಥರಾವ್)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಮಾಜ ಕಲ್ಯಾಣ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
5) ಎಲ್ಲಾ ಜಿಲ್ಲಾಧಿಕಾರಿಗಳು } ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಇವರ ಮುಖಾಂತರ
6) ಎಲ್ಲಾ ಜಿಲ್ಲಾ ಪಂಚಾಯ್ತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು. } ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಇವರ ಮುಖಾಂತರ
7) ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ,
8) ಶಾಖಾ / ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು